# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(Corporate Identity Number (CIN): U40109KA1999SGC025521)

## ನೇಮಕಾತಿ- ಸ್ಥಳ ನಿಯುಕ್ತಿಗಾಗಿ ಕೌನ್ಸಿಲಿಂಗ್

## ಅಧಿಸೂಚನೆ

**ಸಂಖ್ಯೆ: ಕವಿಪ್ರನಿನಿ/ಬಿ16/40360/2016-17** **ದಿನಾಂಕ: 16.03.2018**

ವಿಷಯ: ಕವಿಪ್ರನಿನಿಯಲ್ಲಿ ಸಹಾಯಕ ಇಂಜಿನಿಯರ್(ವಿದ್ಯುತ್), ಸಹಾಯಕ ಲೆಕ್ಕಾಧಿಕಾರಿ, ಕಿರಿಯ ಇಂಜಿನಿಯರ್(ವಿದ್ಯುತ್/ಸಿವಿಲ್), ಸಹಾಯಕ ಮತ್ತು ಕಿರಿಯ ಸಹಾಯಕ ಹುದ್ದೆಗಳ ನೇಮಕಾತಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳ ಸ್ಥಳ ನಿಯುಕ್ತಿಗಾಗಿ ಕೌನ್ಸಿಲಿಂಗ್ ನಡೆಸುವ ಬಗ್ಗೆ.

ಉಲ್ಲೇಖ:
1. ನಿಗಮದ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016-17, ದಿನಾಂಕ: 08.09.2016.
2. ಅಂತಿಮ ಆಯ್ಕೆ ಪಟ್ಟಿ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016-17, ದಿನಾಂಕ: 06.03.2018.

*****

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿ ಸಹಾಯಕ ಇಂಜಿನಿಯರ್(ವಿದ್ಯುತ್), ಸಹಾಯಕ ಲೆಕ್ಕಾಧಿಕಾರಿ, ಕಿರಿಯ ಇಂಜಿನಿಯರ್(ವಿದ್ಯುತ್/ಸಿವಿಲ್), ಸಹಾಯಕ ಮತ್ತು ಕಿರಿಯ ಸಹಾಯಕ ಹುದ್ದೆಗೆ ಆಯ್ಕೆಯಾಗಿರುವ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು, ದಿನಾಂಕ; 06.03.2018 ರಂದು ಕವಿಪ್ರನಿನಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುತ್ತದೆ.

ಸದರಿ ಅಂತಿಮ ಅಯ್ಕೆ ಪಟ್ಟಿಯನ್ವಯ ಆಯ್ಕೆಯಾಗಿರುವ ಅಭ್ಯರ್ಥಿಗಳ ಸ್ಥಳ ನಿಯುಕ್ತಿಗಾಗಿ, **ದಿನಾಂಕ: 24.03.2018 ಮತ್ತು 25.03.2018 ರವರೆಗೆ ಕೌನ್ಸಿಲಿಂಗ್ ನಡೆಸಲಾಗುತ್ತಿರುವುದರಿಂದ,** ಅಭ್ಯರ್ಥಿಗಳು ತಮ್ಮ ಮೂಲ ಗುರುತಿನ ಚೀಟಿ (ಆಧಾರ್ ಕಾರ್ಡ್/ವೋಟರ್ ಕಾರ್ಡ್/ಚಾಲನಾ ಪರವಾನಗಿ/ಪಾಸ್‌ಪೋರ್ಟ್/ ಪ್ಯಾನ್ ಕಾರ್ಡ್) ಹಾಗೂ ಗುರುತಿನ ಚೀಟಿಯ ಸ್ವ-ದೃಢೀಕೃತ ಪ್ರತಿಯೊಂದಿಗೆ, KPTCL ACCOUNTS OFFICERS' ASSOCIATION, Silver Jubilee Building, #28, Race Course Road, Opposite to New Congress Party Office, Ananda Rao Circle, Bangalore-560009 (Within 1km radius of KEMPEGOWDA BUS STAND & CITY RAILWAY STATION) ಇಲ್ಲಿ ತಪ್ಪದೆ ಹಾಜರಾಗಲು ತಿಳಿಸಿದೆ.

**ಕೌನ್ಸಿಲಿಂಗ್‌ಗಾಗಿ ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳ ಮೆರಿಟ್ ಅನುಸಾರ ಕೌನ್ಸಿಲಿಂಗ್ ನಿಗದಿಪಡಿಸಲಾಗಿದ್ದು, ವಿವರಗಳನ್ನು ಅನುಬಂಧ-1 ರಲ್ಲಿ ಪ್ರಕಟಿಸಲಾಗಿದೆ.** (www.kptcl.com)

ನಿಗದಿಪಡಿಸಿರುವ ಕೌನ್ಸಿಲಿಂಗ್ ದಿನಾಂಕದಂದು ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳು ಹಾಜರಾಗದಿದ್ದಲ್ಲಿ, ಕೌನ್ಸಿಲಿಂಗ್ ನಂತರ ಖಾಲಿ ಉಳಿಯುವ, ಕರ್ನಾಟಕ ರಾಜ್ಯದಲ್ಲಿನ ಕವಿಪ್ರನಿನಿ ವ್ಯಾಪ್ತಿಯ ಯಾವುದಾದರೂ ಕಚೇರಿ/ಸ್ಟೇಷನ್‌ಗಳಿಗೆ ಅಭ್ಯರ್ಥಿಗಳನ್ನು ನಿಯೋಜಿಸಲಾಗುವುದು. ಕೌನ್ಸಿಲಿಂಗ್‌ಗೆ ನಿಗದಿಪಡಿಸಿರುವ ದಿನಾಂಕವನ್ನು ಹೊರತುಪಡಿಸಿ ಇನ್ಯಾವುದೇ ದಿನಾಂಕದಂದು ಕೌನ್ಸಿಲಿಂಗ್ ನಡೆಸಲಾಗುವುದಿಲ್ಲ.

ಮುಂದುವರೆದು, ಆಯ್ಕೆಗೊಂಡಿರುವ ಅಭ್ಯರ್ಥಿಗಳ ಪೂರ್ವ ಚರಿತ್ರೆಯ ವರದಿಯನ್ನು ನೀಡುವಂತೆ ಕೋರಿ ಅಭ್ಯರ್ಥಿಗಳು ಆನ್-ಲೈನ್ ಅರ್ಜಿಯಲ್ಲಿ ಒದಗಿಸಿರುವ ವಿಳಾಸದ ವ್ಯಾಪ್ತಿಯ ಜಿಲ್ಲೆಯ ಪೋಲೀಸ್ ಅಧೀಕ್ಷಕರುಗಳಿಗೆ, ದಿನಾಂಕ: 09.03.2018 ಮತ್ತು 13.03.2018 ರಂದು ಪತ್ರವನ್ನು ಬರೆಯಲಾಗಿರುತ್ತದೆ. ಮುಂದುವರೆದು ವಿವಿಧ ಪ್ರವರ್ಗಗಳಡಿಯಲ್ಲಿ ಹಾಗೂ ಸಾಮಾನ್ಯ ವರ್ಗದ ಗ್ರಾಮೀಣ ಮೀಸಲಾತಿ ಕೋಟಾದಡಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳು ಮೂಲ ದಾಖಲಾತಿ ಪರಿಶೀಲನಾ ವೇಳೆಯಲ್ಲಿ ಸಲ್ಲಿಸಿದ್ದ ಮೂಲ ಜಾತಿ/ಆದಾಯ ಪ್ರಮಾಣ ಪತ್ರವನ್ನು ಪರಿಶೀಲಿಸಿ ಸಿಂಧುತ್ವ ಪ್ರಮಾಣ ಪತ್ರ ನೀಡುವಂತೆ/ಮೇಲುಸ್ತರಕ್ಕೆ ಸೇರಿಲ್ಲವೆಂದು ದೃಢಪಡಿಸುವಂತೆ ಕೋರಿ ಸಂಬಂಧಿಸಿದ ಜಿಲ್ಲಾಧಿಕಾರಿ ರವರಿಗೆ, ದಿನಾಂಕ; 13.03.2018 ರಂದು ಪತ್ರ ಬರೆಯಲಾಗಿರುತ್ತದೆ. ಆಯ್ಕೆಗೊಂಡಿರುವ ಅಭ್ಯರ್ಥಿಗಳು ಸಂಬಂಧಿಸಿದ ಪೋಲೀಸ್ ಅಧೀಕ್ಷಕರು ಹಾಗೂ ಜಿಲ್ಲಾಧಿಕಾರಿ ರವರ ಕಚೇರಿಯಿಂದ ಕೋರುವ ಅಗತ್ಯ ದಾಖಲೆ/ಮಾಹಿತಿಯನ್ನು ಜರೂರಾಗಿ ಒದಗಿಸಿ ಸಹಕರಿಸಬೇಕೆಂದು ತಿಳಿಸಲಾಗಿದೆ.

**ವಿಚಾರಣೆಗಾಗಿ ಸಂಪರ್ಕಿಸಿ: 080-22211527, Ext.: 3872, 3789 (ಬೆಳಗ್ಗೆ 10:30 ರಿಂದ ಸಂಜೆ 5:30ರವರೆಗೆ)**

**ನಿರ್ದೇಶಕರು**
**(ಆಡಳಿತ ಮತ್ತು ಮಾನವ ಸಂಪನ್ಮೂಲ)**

# KARNATAKA POWER TRANSMISSION CORPORATION LIMITED

(Corporate Identity Number (CIN): U40109KA1999SGC025521)

## Recruitment-Counseling for Posting

## NOTIFICATION

**No: KPTCL/B16/40360/2016-17** **Date: 16.03.2018**

Sub: Counseling for place of posting to the candidates selected for recruitment to the post of Assistant Engineer (Elec.), Assistant Accounts Officer, Junior Engineer (Elec./Civil), Assistant and Junior Assistant in KPTCL-Reg.

Ref:
1. Employment Notification No: KPTCL/B16/40360/2016-17 dated 08.09.2016.
2. Final Selection List Notification No: KPTCL/B16/40360/2016-17 dated 06.03.2018

*****

The Final Selection List of the candidates for recruitment to the post of Assistant Engineer(Elec.), Assistant Accounts Officer, Junior Engineer (Elec./Civil), Assistant and Junior Assistant was published on 06.03.2018 in KPTCL website.

The Counseling for the selected candidates for the purpose of postings is scheduled to be conducted on 24.03.2018 and 25.03.2018 at **KPTCL ACCOUNTS OFFICERS' ASSOCIATION, Silver Jubilee Building, #28, Race Course Road, Opposite to New Congress Party Office, Ananda Rao Circle, Bangalore-560009 (Within 1km radius of KEMPEGOWDA BUS STAND & CITY RAILWAY STATION).** The candidates are instructed to attend the counseling session along with the Original Identity Card (Aadhar Card/Voter ID/Driving License/Pass Port/Pan Card) and a self attested photocopy of the Identity Card.

The counseling session will be conducted in the order of Merit as per the Final Selection List. The Schedule is published in Annexure-1. (www.kptcl.com)

If the candidate fails to attend the counseling session on the scheduled date, posting will be made against of the remaining vacant posts in any of the Office/Station in the jurisdiction of KPTCL. Counseling will not be conducted on any other day other than the scheduled date.

Further, it is hereby informed that, letters have been addressed on 09.03.2018 and 13.03.2018 to the Superintendent of Police of various districts to furnish a verification report on the antecedents of the selected candidates in their jurisdiction on the basis of the address furnished by the candidates in the online application. The original Caste/Income certificates of the candidates who have been selected under various categories (SC/ST/OBC) and of the candidates who have been selected under GM_Rural quota, which were produced at the time of document verification have been sent to concerned District Commissioner for furnishing the Validity Certificate/confirmation that they come within the creamy layer. The selected candidates are hereby instructed to produce the relevant documents to be sought by the office of the jurisdictional Superintendent of Police and District Commissioner.

**For any enquiries contact: 080-22211527 Ext: 3872, 3789 (From 10:30AM to 05:30PM)**

Director (Admn. &HR)
KPTCL